ತಾಲ್ಲೂಕುಗಳಲ್ಲಿ ಹೊಸದಾಗಿ ಪಶುವೈದ್ಯ ಸಂಸ್ಥೆಗಳನ್ನು ಪ್ರಾರಂಭಿಸುವ ಕಾರ್ಯಕ್ರಮ ಸರ್ಕಾರದ ಮುಂದೆ ಇರುವುದಿಲ್ಲ

(ಇ) ಹೊಸ ಪಶುಚಿಕಿತ್ಸಾಲಯಗಳನ್ನು ಪ್ರಾರಂಭಿಸಲು ಯಾವುದೇ ಕಾಲಮಿತಿಯನ್ನು ನಿಗದಿಗೊಳಿಸಿರುವುದಿಲ್ಲ ಆದರೆ ಡಾ ಡಿ ಎಂ ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನಾ ವರದಿಯಲ್ಲಿನ ಶಿಫಾರಸ್ಸಿನನ್ವಯ 8 ವರ್ಷಗಳ ಅವಧಿಯಲ್ಲಿ ಮಾಡಬಹುದಾಗಿದೆ

ವಿಸ್ತರಣಾಧಿಕಾರಿಗಳ ಹುದ್ದೆ ಮೇಲ್ದರ್ಜೆಗೇರಿಸುವುದು

670 (1137) ಶ್ರೀಮತಿ ಶಕುಂತಲೆ ಟಿ ಶೆಟ್ಟಿ (ಪುತ್ತೂರು) – ಮಾನ್ಯ ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹಿಂದುಳಿದ ವರ್ಗಗಳ ಇಲಾಖೆಯ ವಿಸ್ತರಣಾಧಿಕಾರಿ ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ (ಉನ್ನತೀಕರಿಸುವ) ಯೋಜನೆ ಸರ್ಕಾರದ ಮುಂದಿದೆಯೇ ,

(ಆ) ಹಾಗಿದ್ದಲ್ಲಿ ಯಾವಾಗ ಕಾರ್ಯಗತಗೊಳಿಸಲಾಗುವುದು , ವಿವರ ಒದಗಿಸುವುದು ,

(ಇ) ಪುತ್ತೂರು ಕ್ಷೇತ್ರದಲ್ಲಿರುವ ಮೇಲ್ವಿಚಾರಕರ ವಾರ್ಡನ್ ಮತ್ತು ಅಡಿಗೆಯವರ ಹುದ್ದೆಗಳ ಸಂಖ್ಯೆ ಎಷ್ಟು , ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ,

(ಈ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು ಹಾಗೂ ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) –

(ಅ) ಹೌದು

(ಆ) ಹಿಂದುಳಿದ ವರ್ಗಗಳ ಇಲಾಖೆಯಲ್ಲಿರುವ 176 ತಾಲ್ಲೂಕುಗಳಲ್ಲಿನ ವಿಸ್ತರಣಾಧಿಕಾರಿಗಳ ಹುದ್ದೆಯ ವೇತನ ಶ್ರೇಣಿಯನ್ನು ರೂ 5200–9580 ರಿಂದ 6000–11200 ವೇತನ ಶ್ರೇಣಿಗೆ ಮೇಲ್ದರ್ಜೆಗೇರಿಸುವ ಬಗ್ಗೆ ಪರಿಶೀಲನೆಯಲ್ಲಿದೆ

(ಇ) ಪುತ್ತೂರು ಕ್ಷೇತ್ರದಲ್ಲಿರುವ ಮೇಲ್ವಿಚಾರಕರ ವಾರ್ಡನ್ ಮತ್ತು ಅಡುಗೆಯವರ ಹುದ್ದೆಗಳ ಸಂಖ್ಯೆ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ

ಕ್ರ ಸಂ	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳು	ಖಾಲಿಯಿರುವ ಹುದ್ದೆಗಳು
1	ನಿಲಯ ಪಾಲಕರು	2	2
2	ನಿಲಯ ಮೀಲ್ವಿಚಾರಕರು	3	0
3	ಅಡುಗೆಯವರು	10	4
4	ಅಡುಗೆ ಸಹಾಯಕರು	5	3
5	ರಾತ್ರಿ ಕಾವಲುಗಾರರು	2	1
	ಒಟ್ಟು	22	10

(ಈ) ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಒಟ್ಟು1264 ಹುದ್ದೆಗಳು ಖಾಲಿ ಇರುತ್ತವೆ

ಇದಲ್ಲದೇ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಒಟ್ಟು 1209 ಹುದ್ದೆಗಳು ಖಾಲಿ ಇರುತ್ತವೆ

ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಆರ್ಥಿಕ ಮಿತವ್ಯಯ ಆದೇಶವನ್ನು ಸಡಲಿಸಿ ಭರ್ತಿ ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ

671 (910) ಶ್ರೀ ಶಂಕರಲಿಂಗೇಗೌಡ ಹೆಚ್ ಎಸ್ (ಚಾಮರಾಜ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮೈಸೂರಿನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಸೇರಿದ ವಸತಿ ಗೃಹಗಳ ಸಂಖ್ಯೆ ಎಷ್ಟು , ಈ ವಸತಿ ಗೃಹಗಳನ್ನು ಯಾರ್ಯಾರಿಗೆ ಮಂಜೂರು ಮಾಡಲಾಗಿದೆ ತಿಳಿಸಿ ,

(ಆ) ಮೈಸೂರಿನ ವೈದ್ಯಕೀಯ ಕಾಲೇಜಿನ ಸಿಬ್ಬಂದಿಗಳಿಂದ ವಸತಿ ಗೃಹ ಮಂಜೂರಾತಿ ಕೋರಿ ಬಂದಿರುವ ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಇರುವ ಅರ್ಜಿಗಳ ಸಂಖ್ಯ ಎಷ್ಟು ,

(ಇ) ಸದರಿ ಬಾಕಿ ಅರ್ಜಿಗಳ ಅಭ್ಯರ್ಥಿಗಳ ಹೆಸರು, ಹುದ್ದೆ, ಅವರುಗಳು ಎಷ್ಟು ವರ್ಷಗಳಿಂದ ವಸತಿ ಗೃಹಕ್ಕಾಗಿ ಎಷ್ಟು ಭಾರಿ ಅರ್ಜಿ ಸಲ್ಲಿಸಿರುವರು (ವಿವರ ಒದಗಿಸುವುದು) ,

(ಈ) ವಸತಿ ಗೃಹ ಮಂಜೂರಾತಿಗೆ ಅನುಸರಿಸಲಾಗುವ ಮಾನದಂಡವೇನು ,

(ಉ) ಬಾಕಿ ಇರುವ ಅರ್ಜಿ ವಿಲೇವಾರಿಗೆ ಎಷ್ಟು ಸಮಯ ಬೇಕಾಗುವುದು ?